ವಿರುದ್ಧ ಯಾವ ಕ್ರಮವನ್ನು ಜರುಗಿಸಲಾಗಿದೆ ? ಉದ್ಭವಿಸುವುದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ
(ಕಂದಾಯ ಸಚಿವರು)

ವಿಷಯ:- ವಿಟ್ಲಪೇಟೆಗೆ ಬಸ್ಸು ನಿಲ್ದಾಣ ನಿರ್ಮಾಣ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 14 (172)

ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ವಿಟ್ಲಪೇಟೆಗೆ ಒಂದು ಸುಸಜ್ಜಿತ ಬಸ್ಸು ನಿಲ್ದಾಣದ ಅಗತ್ಯವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ : ಇಲ್ಲ.

ಆ) ಹಾಗಿದ್ದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ? : ಉದ್ಭವಿಸುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ
(ಸಾರಿಗೆ ಸಚಿವರು)

ವಿಷಯ:- ಗೇರು ಕೃಷಿ ಜಮೀನು ಕುರಿತು
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 15 (170)

ಶ್ರೀ ಎ. ರುಕ್ಕಯ್ಯ ಪೂಜಾರಿ (ವಿಟ್ಲ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರಿಗೆ ಗೇರು ಕೃಷಿ ಮಾಡಲು ಸರ್ಕಾರದವರು ಸರಕಾರಿ ಜಮೀನನ್ನು ಗುತ್ತಿಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? : ಈ ವಿಷಯವು ಈ ಇಲಾಖೆಯ ವ್ಯಾಪ್ತಿಗೆ ಹಾಗೂ ಗಮನಕ್ಕೆ ಬಂದಿರುವುದಿಲ್ಲ.

ಆ) ಹಾಗಿದ್ದಲ್ಲಿ ಎಷ್ಟು ಒಟ್ಟು ಜಮೀನನ್ನು ಯಾವ ಷರತ್ತಿನ ಮೇಲೆ ಕೊಡಲಾಗಿದೆ ? : ಉದ್ಭವಿಸುವುದಿಲ್ಲ.

ಇ) ಷರತ್ತು ಪೂರೈಸಿದವರಿಗೆ ಇನ್ನೂ ಹಕ್ಕು ಪತ್ರ ಕೊಡದಿರಲು ಕಾರಣಗಳೇನು ? ಹಾಗೂ ಯಾವಾಗ ಕೊಡಲಾಗುವುದು.: ಉದ್ಭವಿಸುವುದಿಲ್ಲ.

ಶ್ರೀ ಡಿ. ಟಿ. ಜಯಕುಮಾರ್
(ತೋಟಗಾರಿಕೆ ರಾಜ್ಯ ಸಚಿವರು)

ವಿಷಯ: ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗಿನ ಅಭಿವೃದ್ಧಿ ಯೋಜನೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 17 (90)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1996-97 ರಲ್ಲಿ ಬೆಂಗಳೂರಿನ ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗಿನ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳಾವುವು ? : ಕಬ್ಬನ್ ಪಾರ್ಕ್‌ನ ಅಭಿವೃದ್ಧಿಗೆ

ಹಮ್ಮಿಕೊಂಡಿರುವ ಕಾರ್ಯಕ್ರಮಗಳು

1. ಜೈನ್‌ಲಿಂಕ್ ಬೇಲಿ ನಿರ್ಮಾಣ ಹಡ್ಸನ್ ಸರ್ಕಲ್‌ನಿಂದ ಲೈಬ್ರರಿವರೆಗೆ ಮತ್ತು ಸಿದ್ದಲಿಂಗಯ್ಯ ಸರ್ಕಲ್ ನಿಂದ ಮಹಾರಾಜ ಪ್ರತಿಮೆವರೆಗೆ.

2. ಉದ್ಯಾನವನಕ್ಕೆ ಬೇಕಾಗುವ ಸಾಮಗ್ರಿಗಳು.

3. ಉದ್ಯಾನವನದಲ್ಲಿ ವಿದ್ಯುತ್ ದೀಪದ ನಿರ್ವಹಣೆ.

4. ಗುಲಾಬಿ ವನದ ಪುನಶ್ಚೇತನ ಕಾರ್ಯ.

5. ಮಹಾರಾಜ ಪ್ರತಿಮೆ ವಿಭಾಗದಲ್ಲಿನ ಆಧುನಿಕ ಅಭಿವೃದ್ಧಿ ಹಾಗೂ ನೀರಿನ ಸೌಕರ್ಯ ಕಲ್ಪಿಸುವುದು.

6. ಎಲ್.ಆರ್.ಡಿ.ಇ. ಪ್ರದೇಶ (ಸಂಗೀತ ನೃತ್ಯ ಕಾರಂಜಿ) ಉದ್ಯಾನವನದ ಅಭಿವೃದ್ಧಿ ಯೋಜನೆ.

7. ಬ್ಯಾಂಡ್ ಸ್ಟಾಂಡ್ ಸುತ್ತಲಿನ ಪ್ರದೇಶದಲ್ಲಿ ಕಾಲು ದಾರಿಗಳನ್ನು ಉತ್ತಮಪಡಿಸುವಿಕೆ.

ಲಾಲ್‌ಬಾಗ್ ಸಸ್ಯತೋಟದಲ್ಲಿನ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು.

1. ಗಾಜಿನ ಮನೆಯಲ್ಲಿ ವಿದ್ಯುತ್ ದೀಪ ಬಲಪಡಿಸುವುದು.

2. ಲಾಲ್‌ಬಾಗ್ ಕೆರೆಯನ್ನು ಸ್ವಚ್ಚಗೊಳಿಸುವುದು.

3. ಪೈಕಾಸ್ ಲಾನ್‌ಗೆ ತುಂತುರು ನೀರಾವರಿ ವ್ಯವಸ್ಥೆ.

4. ಟೊಪಿಯಾರಿ ಮತ್ತು ಪ್ಲೂಮೇರಿಯಾ ತೋಟಗಳಿಗೆ ಹನಿ ನೀರಾವರಿ ಒದಗಿಸುವುದು.

5. ತೋಟಗಳ ಸಾಮಾಗ್ರಿಗಳನ್ನು ಹಾಗೂ ಅವಶ್ಯಕತೆ ಇತರೆ ವಸ್ತುಗಳನ್ನು ಖರೀದಿಸುವುದು (ಅಪರೂಪದ ತಳಿಗಳು ಸೇರಿಸುತ್ತವೆ.)

6. ಸಾರ್ವಜನಿಕರಿಗೆ ಆಸನದ ವ್ಯವಸ್ಥೆ, ಸ್ವಚ್ಚತೆಗೆ ಡೆಸ್ಟ್‌ಬಿನ್ ಅಳವಡಣೆ ಇತ್ಯಾದಿ.

7. ಅಭಿವೃದ್ಧಿಯಾಗದ ಪ್ರದೇಶಗಳಲ್ಲಿ ಅಪರೂಪ ಗಿಡಗಳನ್ನು ಹಾಕುವುದು ಮತ್ತು ರಸ್ತೆ ಬದಿಗಳಲ್ಲಿ ಹೂವಿನ : ಅಲಂಕಾರಿಕ.ಗಿಡಗಳಿಂದ ಶೃಂಗರಿಸುವುದು.

8. ಕೆಲವು ಭಾಗಗಳಿಗೆ ಅಲಿಕಾರಿಕ ಬೇಲಿಗಳ ನಿರ್ಮಾಣ ಕಾಲುದಾರಿಗಳ ಇಕ್ಕೆಲಗಳಲ್ಲಿ ಬಣ್ಣ ಬೆಳೆಸುವ ಕಾರ್ಯ ಇತ್ಯಾದಿ.

9. ಗುಲಾಬಿ ತೋಟದ ಪುನಶ್ಚೇತನ, ಪ್ರತಿಮೆ ಗಾರ್ಡನ್ ವಿಭಾಗದಲ್ಲಿನ ಲಾನ್ ಪುನಶ್ಚೇತನ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳು.

10. ಕೆಂಪೇಗೌಡ ಗೋಪುರದ ಹತ್ತಿರ ಕಾಲುದಾರಿ ನಿರ್ಮಾಣ ಮತ್ತು ಹಾಲಿ ಇರುವ ಶೌಚಾಲಯದ ನವೀಕರಣ ಇತ್ಯಾದಿ.

11. ಹೊಸದಾಗಿ 2 ಬೋರವೆಲ್‌ಗಳನ್ನು ಕೊರೆಸುವುದು ಮತ್ತು ತಾವರೆ ಕೊಳವನ್ನು ಸ್ವಚ್ಚತೆಗೊಳಿಸುವುದು.

ವಿಷಯ:- ಕಬ್ಬನ್‌ಪಾಕ್ ಮತ್ತು ಲಾಲ್‌ಬಾಗ್‌ಗೆ ಬರುವ ಪ್ರವಾಸಿಗರಿಗೆ ರಕ್ಷಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 18 (90)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ)